ದಿ: 04-03-2026 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ (ಸತೀಶ್ ಕೆ.)**:

3. ಈಗ ನನಗೆ ತೋರಿಸಿದ ನೋಟಿಸ್ಸಿನ ದೃಡೀಕೃತ ನಕಲು ದಿಃ 12-09-2020 ಇದ್ದು, ಸಾಕ್ಷಿದಾರರು ಅದನ್ನು ನೋಡಿ ಗುರುತಿಸಿರುವುದರಿಂದ, ಅದನ್ನು ನಿಪಿ-1 ಅಂತ ಗುರುತಿಸಲಾಯಿತು. ನಿಪಿ-1 ಕ್ಕೆ ನಾನು ಸಹಿ ಮಾಡಿದ್ದೇನೆ. (ಮೂಲ ದಾಖಲೆಗಳು Spl.C.NDPS.9/2020 ರಲ್ಲಿ ಇರುತ್ತವೆ ಅಂತ ಪಿ.ಪಿ. ರವರು ನುಡಿದಿರುತ್ತಾರೆ.)

4. ಆ ಸಮಯದಲ್ಲಿ ನನ್ನೊಂದಿಗೆ ಚಾಸಾ-2 ರವರು ಸಹ ಹಾಜರಿದ್ದರು. ಆಯುಕ್ತರು ನನಗೆ ಪಂಚನಾಮೆಗೆ ಹೋಗಿ ಸಹಕರಿಸಿ ಅಂತ ಹೇಳಿದ್ದರು. ಅದರಂತೆ ನಾವು ದಿಃ 12-09-2020 ರಂದು ನಾನು ಮತ್ತು ಚಾಸಾ-2 ರವರು ಸಿ.ಪಿ.ಐ., ಹರಿಹರ ಗ್ರಾಮಾಂತರ ವೃತ್ತ ನಿರೀಕ್ಷಕರ ಕಛೇರಿಗೆ ಹೋಗಿದ್ದು, ಆಗ ಮಧ್ಯಾಹ್ನ 12.30 ಗಂಟೆ ಆಗಿತ್ತು. ಆ ವೇಳೆಗೆ ಚಾಸಾ-4 ರವರು ಬಂದಿದ್ದರು. ನಾವು ಎಲ್ಲರೂ ಪರಸ್ಪರ ಪರಿಚಯ ಮಾಡಿಕೊಂಡೆವು. ಹರಿಹರ-ಶಿವಮೊಗ್ಗ ರಸ್ತೆಯಲ್ಲಿರುವ ಭರಣಿ ಹೋಟೆಲ್ ಮುಂಭಾಗದಲ್ಲಿ ಯಾರೋ ಒಬ್ಬರು ಗಾಂಜಾವನ್ನು ಅಕ್ರಮವಾಗಿ ಮಾರಾಟ ಮಾಡುತ್ತಿರುವುದಾಗಿ ಮಾಹಿತಿ ಬಂದಿದ್ದು, ದಾಳಿ ಮಾಡಲು ಪಂಚರಾಗಿ ಸಹಕರಿಸಲು ನೋಟಿಸ್ಸು ಜಾರಿ ಮಾಡಿದರು. ಆ ಸಮಯದಲ್ಲಿ ಪತ್ರಾಂಕಿತ ಅಧಿಕಾರಿಗಳಾಗಿ ಚಾಸಾ-4 ರವರನ್ನು ನೇಮಕ ಮಾಡಿದರು.

5. ನಾನು ಪೊಲೀಸ್ ಸಿಬ್ಬಂದಿ ಎಲ್ಲರೂ ಎರಡು ಇಲಾಖಾ ವಾಹನಗಳಲ್ಲಿ ಅಗತ್ಯ ಸಾಮಾಗ್ರಿಗಳನ್ನು ತೆಗೆದುಕೊಂಡು ಸದರಿ ಹರಿಹರ-ಶಿವಮೊಗ್ಗ ರಸ್ತೆಯಲ್ಲಿರುವ ಇಂಡಿಯನ್ ಡಾಬಾದ ಹತ್ತಿರ ಗಾಡಿಯನ್ನು ನಿಲ್ಲಿಸಿದರು. ನಾವೆಲ್ಲರೂ ಪರಸ್ಪರ ಅಂಗ ಶೋಧನೆ ಮಾಡಿಕೊಂಡು ನಮ್ಮ ಬಳಿ ಯಾವುದೇ ಗಾಂಜಾ ವಸ್ತು ಇಲ್ಲ ಅಂತ ಖಚಿತಪಡಿಸಿಕೊಂಡೆವು. ಆಗ ಆಟೋದಲ್ಲಿ 03 ಜನ ಬಂದರು. ಅವರನ್ನು ಸುತ್ತುವರೆದ ಅವರ ಬಳಿ ಇರುವ ಕಾಲೇಜು ಬ್ಯಾಗ್ ನ್ನು ಪೊಲೀಸರು ಪರಿಶೀಲನೆ

ಮಾಡಿದರು. ಆ ಮೂವರ ವ್ಯಕ್ತಿಗಳ ಹೆಸರು ರಾಹುಲ್, ಮಲ್ಲಿಕಾರ್ಜುನ ಮತ್ತು ಪ್ರಮೋದ ಅಂತ ತಿಳಿಸಿದರು. ಅವರನ್ನು ವಿಚಾರಿಸಿದಾಗ ಗಾಂಜಾ ಮಾರಾಟ ಮಾಡುತ್ತಿರುವುದಾಗಿ ತಿಳಿಸಿದರು. ಪತ್ರಾಂಕಿತ ಅಧಿಕಾರಿಗಳಾದ ಚಾಸಾ-4 ರವರು ಅಂಗ ಶೋಧನೆ ಮಾಡಲು ಕೇಳಿದರು, ಅದಕ್ಕೆ ಆರೋಪಿತರು ಒಪ್ಪಿಕೊಂಡಿರುತ್ತಾರೆ. ಆರೋಪಿ ರಾಹುಲ್ ಬಳಿ Fast track ಎಂಬ ಹೆಸರಿನ ಕೆಂಪು ಬಣ್ಣದ ಕಾಲೇಜ್ ಬ್ಯಾಗ್ ನ್ನು ನೋಡಿದಾಗ ಅದರಲ್ಲಿ ಸೊಪ್ಪಿನ ತರ ವಸ್ತು ಇದ್ದು, ಪೊಲೀಸರು ಅದನ್ನು ಗ್ರಹಿಸಿದಾಗ ಅದು ಗಾಟು ವಾಸನೆ ಬಂತು. ಅದು ಮೊಗ್ಗು, ಸೊಪ್ಪಿನಿಂದ ಕೂಡಿತ್ತು. ಆದ್ದರಿಂದ ಅದು ಗಾಂಜಾ ಅಂತ ಖಚಿತಪಡಿಸಿಕೊಂಡರು. ನಂತರ ಅದನ್ನು ತೂಕ ಮಾಡಿ ನೋಡಿದಾಗ 2 ಕೆ.ಜಿ. 45 ಗ್ರಾಂ. ಇದ್ದು, ಅದನ್ನು ಬಟ್ಟೆಯ ಚೀಲದಲ್ಲಿ ಹಾಕಿ ಸೀಲ್ ಮಾಡಿದರು.

6. 2 ನೇ ಆರೋಪಿಯ ಬಳಿ ಬೂದು ಬಣ್ಣದ ನೀಲಿ ಪಟ್ಟಿ ಇರುವ ಬ್ಯಾಗ್ ಇತ್ತು. ಅದರಲ್ಲಿ ಖಾಕಿ ಬಣ್ಣದ ಟೇಪ್ ನಿಂದ ಸುತ್ತಲ್ಪಟ್ಟಿತ್ತು. ಅದನ್ನು ತೆರೆದು ನೋಡಲಾಗಿ ಅದು ಸೊಪ್ಪಿನ ತರ ವಸ್ತು ಇದ್ದು, ಗಾಟು ವಾಸನೆ ಬರುತ್ತಿತ್ತು ಮತ್ತು ಮೊಗ್ಗು ಸೊಪ್ಪಿನಿಂದ ಕೂಡಿತ್ತು. ಅದು ಗಾಂಜಾ ಅಂತ ಖಚಿತಪಡಿಸಿಕೊಂಡರು. ನಂತರ ನಂತರ ಅದನ್ನು ತೂಕ ಮಾಡಿ ನೋಡಿದಾಗ 2 ಕೆ.ಜಿ. 45 ಗ್ರಾಂ. ಇದ್ದು, ಅದನ್ನು ಬಟ್ಟೆಯ ಚೀಲದಲ್ಲಿ ಹಾಕಿ ಸೀಲ್ ಮಾಡಿದರು.

7. ನಂತರ 3 ನೇ ಆರೋಪಿತನ ಅಂಗ ಶೋಧನೆ ಮಾಡಿದಾಗ 11 ಪ್ಲಾಸ್ಟಿಕ್ ಕವರ್ ನಲ್ಲಿ ಹೂವು, ಮೊಗ್ಗು ಮತ್ತು ಸೊಪ್ಪಿನಿಂದ ಕೂಡಿದ ವಸ್ತು ಇತ್ತು. ಅದು ಗಾಟು ವಾಸನೆ ಬರುತ್ತಿತ್ತು. ಅದು ಗಾಂಜಾ ಅಂತ ಖಚಿತಪಡಿಸಿಕೊಂಡರು. ನಂತರ ನಂತರ ಅದನ್ನು ತೂಕ ಮಾಡಿ ನೋಡಿದಾಗ 2 ಕೆ.ಜಿ. 80 ಗ್ರಾಂ. ಇದ್ದು, ಅದನ್ನು ಬಟ್ಟೆಯ ಚೀಲದಲ್ಲಿ ಹಾಕಿ ಸೀಲ್ ಮಾಡಿದರು. 3 ನೇ ಆರೋಪಿಯ ಎಡಗಡೆ ಜೇಬಿನಲ್ಲಿ 23 ಖಾಲಿ ಪ್ಲಾಸ್ಟಿಕ್ ಕವರ್ ಗಳು ಇದ್ದವು. ನಂತರ ಅವುಗಳನ್ನು ವಶಪಡಿಸಿಕೊಂಡರು. ಅಮಾನತ್ತುಪಡಿಸಿಕೊಂಡಿರುವಂತ ಮುದ್ದೆ ಮಾಲುಗಳ ಮೇಲೆ ಚಾಸಾ-4 ರವರು ಸಹಿ ಮಾಡಿದರು. ಆ

ಆಟೋದ ನಂಬರ ಕೆ.ಎ. 14 ಬಿ. 8176 ಇರುತ್ತದೆ. ಸದರಿ ಆಟೋವನ್ನು ಸಹ ಪೊಲೀಸರು ವಶಕ್ಕೆ ಪಡೆದುಕೊಂಡರು. ಸ್ಥಳದಲ್ಲಿ ಪೊಲೀಸರು ಪಂಚನಾಮೆ ಮಾಡಿ ನನ್ನ ಸಹಿ ಪಡೆದರು. ಆ ಪಂಚನಾಮೆಯನ್ನು ಈಗ ನೋಡಿ ಅದರಲ್ಲಿ ನನ್ನ ಸಹಿ ಗುರುತಿಸುತ್ತೇನೆ. ಪಂಚನಾಮೆಯನ್ನು ನಿಪಿ-2 ಅಂತ ಗುರುತಿಸಲಾಯಿತು. ( ಮೂಲ ದಾಖಲೆಗಳು Spl.C.NDPS.9/2020 ರಲ್ಲಿ ಇರುತ್ತವೆ ಅಂತ ಪಿ.ಪಿ. ರವರು ನುಡಿದಿರುತ್ತಾರೆ.) ಪಂಚನಾಮೆಯ ಕಾಲಕ್ಕೆ 10 ಭಾವಚಿತ್ರಗಳನ್ನು ತೆಗೆದಿದ್ದು, ಸದರಿ ಭಾವಚಿತ್ರಗಳ ಪ್ರತಿ ಕಡತದಲ್ಲಿದ್ದು, ಅದರ ಮೂಲ ಭಾವಚಿತ್ರಗಳು Spl.C.NDPS.9/2020 ರಲ್ಲಿ ಇರುತ್ತವೆ. ಆ ಭಾವಚಿತ್ರಗಳನ್ನು ನಾನುನೋಡಿದರೆ ಗುರುತಿಸುತ್ತೇನೆ. ಅಮಾನತ್ತು ಮಾಡಿಕೊಂಡಿರುವಂತಹ ಮುದ್ದೆ ಮಾಲುಗಳನ್ನು ಈಗ ನ್ಯಾಯಾಲಯದಲ್ಲಿ ನೋಡಿ ಗುರುತಿಸುತ್ತೇನೆ. Fast Track ಅಂತ ಹೆಸರಿನ ಕೆಂಪು ಬಣ್ಣದ ಕಾಲೇಜಿನ ಬ್ಯಾಗ್, ENO ಅಂತ ಹೆಸರಿನ ಬೂದು ಬಣ್ಣದ ನೀಲಿ ಪಟ್ಟಿ ಇರುವ ಕಾಲೇಜು ಬ್ಯಾಗ್, ಖಾಲಿ ಪ್ಲಾಸ್ಟಿಕ್ ಕವರ್, 23 ಖಾಲಿ ಪಾಲಿಥಿನ್ ಕವರ್ ಗಳನ್ನು ಒಟ್ಟಿಗೆ, 03 ಮಾದರಿ ಗಾಂಜಾದ ಪ್ಯಾಕೆಟ್ ನ್ನು ನೋಡಿ ಗುರುತಿಸುತ್ತೇನೆ. ಅವುಗಳನ್ನು ಕ್ರಮವಾಗಿ ಮು.ಮಾ.1 ರಿಂದ 7 ಅಂತ ಗುರುತಿಸಲಾಯಿತು. ಆರೋಪಿತರನ್ನು ನಾನು ನೋಡಿದರೆ ಗುರುತಿಸುತ್ತೇನೆ. ವಿಸಿಯಲ್ಲಿ ನಾನು ನೋಡುತ್ತಿರುವ ಆರೋಪಿಯು ಪ್ರಮೋದ ಇರುತ್ತಾರೆ.

ಈ ಹಂತದಲ್ಲಿ ಪಿ.ಪಿ. ರವರು ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿರುವುದರಿಂದ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ, ಹೇಳಿ, ಕೇಳಿ, ಸರಿ ಇದೆ.

Sd/-

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ದಾವಣಗೆರೆ.